ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.12/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಅನಿಲ್** | | |
| **ತಂದೆಃಹೆಸರು** | **ತಿಪ್ಪಣ್ಣ** | **ಪಿಡಬ್ಲೂಃ** | **13** |
| **ವಯಸ್ಸು** | **21 ವರ್ಷ** | **ಸಿಡಬ್ಲೂಃ** | **11** |
| **ಉದ್ಯೋಗಃ** | **ಚಾಲಕ** | | |
| **ವಾಸ ಸ್ಥಳಃ** | **ಮಳಖೇಡ** | | |

**ದಿನಾಂಕ 29-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ನನಗೆ ಚಾಸಾ-1, 2, 8, 9 ರಿಂದ 10, 13 & 14 ರವರ ಪರಿಚಯ ಇಲ್ಲ. ಮೃತ ರವಿ ಸಹ ನನಗೆ ಗೊತ್ತಿಲ್ಲ. ಆರೋಪಿತರ ಪರಿಚಯ ಇಲ್ಲ.

ಯಾವಾಗ, ಎಲ್ಲಿ ಅಪಘಾತವಾಗಿತ್ತು ಎಂದು ನನಗೆ ಗೊತ್ತಿಲ್ಲ, ಅಪಘಾತ ಪಡಿಸಿದ ವಾಹನದ ಸಂಖ್ಯೆ ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ದಿ. 15-07-2022 ರಂದು ಸಿಂಧನೂರು-ರಾಯಚೂರು ಮುಖ್ಯ ರಸ್ತೆಯ ಸಿ.ನಗರದ ಪಿಡಬ್ಲುಡಿ ಕ್ಯಾಂಪಿನ ನೋಬೆಲ್ ಕಾರ್ ಕೇರ್ ರಸ್ತೆಯಲ್ಲಿ ನಾನು ನನ್ನ ಲಾರಿಯನ್ನು ಚಲಾಯಿಸಿಕೊಂಡು ಹೋಗುತ್ತಿದ್ದಾಗ, ಚಾಸಾ-1 ರವರ ತಂದೆ ರಂಗಪ್ಪ ಬಂಡಿ ಹೊಡೆದುಕೊಂಡು

ಸಿಂಧನೂರು ಕಡೆಗೆ ಹೋಗುತ್ತಿದ್ದಾಗ ಆರೋಪಿತರು ತಮ್ಮ ವಾಹನವನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ನಡೆಸಿಕೊಂಡು ಬಂದು ಡಿಕ್ಕಿ ಪಡಿಸಿ, ಎರಡೂ ಲಾರಿ ಮುಖಾಮುಖಿ ಆಗಿ, ಪಕ್ಕದಲ್ಲಿದ್ದ ಎತ್ತಿನ ಬಂಡಿಗೂ ಸಹ ಅಪಘಾತ ಡಿಕ್ಕಿಪಡಿಸಿದ್ದರಿಂದ, ಅವರಿಗೆ ತೀವ್ರ ತರವಾದ ರಕ್ತಗಾಯವಾಗಿತ್ತು ಎಂದರೆ ಸರಿಯಲ್ಲ. ಸದರಿ ವಿಚಾರವನ್ನು 108 ವಾಹನಕ್ಕೆ ಕರೆ ಮಾಡಿ ತಿಳಿಸಿದ್ದೆ ಎಂದರೆ ಸರಿಯಲ್ಲ. ಲಾರಿಯಲ್ಲಿದ್ದ ಒಬ್ಬ ವ್ಯಕ್ತಿ ಮೃತಪಟ್ಟಿದ್ದ, ಚಾಲಕನನ್ನು ಹೊರಗೆ ತೆಗೆದಿದ್ದು, ಅವರಿಗೆ ಉಪಚರಿಸಿದ್ದಿರಿ ಎಂದರೆ ಸರಿಯಲ್ಲ. ಮೃತಪಟ್ಟರವರ ಹೆಸರು ರವಿ ಎಂದು ತಿಳಿದಿತ್ತು ಎಂದರೆ ಸರಿಯಲ್ಲ. ಆತನಿಗೆ ತೀವ್ರ ತರವಾದ ರಕ್ತಗಾಯಗಳಾಗಿದ್ದವು ಎಂದರೆ ಸರಿಯಲ್ಲ. ಲಾರಿ ಚಾಲಕ & ಕ್ಲೀನರ್ ಗೆ ವಿಚಾರಿಸಿದಾಗ ಚಾಲಕನ ಹೆಸರು ಇಮ್ರಾನ್ ಸಾಹೆಬ್ ಎಂದು, ಕ್ಲೀನರ್ ಹೆಸರು ನೂರುಲ್ಲಾ ಎಂದು ತಿಳಿದಿತ್ತು ಎಂದರೆ ಸರಿಯಲ್ಲ. 2ನೇ ಆರೋಪಿ & ನೂರುಲ್ಲಾರವರಿಗೆ ತೀವ್ರ ತರವಾದ ರಕ್ತಗಾಯಗಳಾಗಿದ್ದವು ಎಂದರೆ ಸರಿಯಲ್ಲ. ರಾಯಚೂರು ರಸ್ತೆ ಕಡೆಯಿಂದ ತನ್ನ ವಾಹನ ಸಂ.ಕೆ ಎ 23/ಎ-4348 ರಲ್ಲಿ ಸಿಮೆಂಟ್ ಚೀಲಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು ಎಂದರೆ ಸರಿಯಲ್ಲ. 2ನೇ ಆರೋಪಿಯ ಲಾರಿ ಸಂ. ಕೆ ಎ 14/ಬಿ-3809 ಆಗಿತ್ತು ಎಂದರೆ ಸರಿಯಲ್ಲ. ಆಯಿಲ್ ಬ್ಯಾರೆಲ್‌ಗಳು ಕೆಳಗೆ ಬಿದ್ದಿದ್ದವು ಎಂದರೆ ಸರಿಯಲ್ಲ. ಸದರಿ ಅಪಘಾತಕ್ಕೆ ಆರೋಪಿತರೇ ಕಾರಣ ಎಂದರೆ ಸರಿಯಲ್ಲ.

ಸದರಿ ವಿಚಾರವಾಗಿ ನಾನು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದಿರುವುದರಿಂದ, ಸಾಕ್ಷಿಯು ಪೋಲೀಸರಿಗೆ ನೀಡಿದ ಹೇಳಿಕೆಯನ್ನು ನಿಪಿ-48 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ.**

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**